ಕರ್ನಾಟಕ ವಿಧಾನಸಭೆ

ಮಂಗಳವಾರ 22ನೇ ಜನವರಿ 2002 ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರಾದ ಶ್ರೀ ಎಂ ವಿ ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು

1) ಮಾನ್ಯ ಸದಸ್ಯರುಗಳಿಗೆ ಅಧ್ಯಕ್ಷರಿಂದ ಹೊಸವರ್ಷದ ಶುಭಾಶಯಗಳು

ಅಧ್ಯಕ್ಷರು ಮಾನ್ಯ ಸದಸ್ಯರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು, ಎಲ್ಲಾ ಸದಸ್ಯರುಗಳು ಅವರವರ ಕ್ಷೇತ್ರಗಳಲ್ಲಿ ಚೆನ್ನಾಗಿ ಹೆಚ್ಚು ಹೆಚ್ಚಾಗಿ ಕೆಲಸಗಳನ್ನು ಮಾಡಿ ಮತದಾರರ ಅಶೋತ್ತರಗಳನ್ನು ಈಡೇರಿಸಬೇಕು ಅದಕ್ಕೆ ಸರ್ಕಾರವೂ ಸಹಕಾರ ಕೊಡಬೇಕೆಂಬುದು ನನ್ನ ಕೋರಿಕೆಯಾಗಿದೆ

ಶ್ರೀ ಅರಗ ಜ್ಞಾನೇಂದ್ರ ಮಾನ್ಯ ಅಧ್ಯಕ್ಷರೇ, ಅದಕ್ಕೆ ನಮಗೂ ಮಾತನಾಡಲು ಸಾಕಷ್ಟು ಕಾಲಾವಕಾಶವನ್ನು ಕೊಡಬೇಕು, ಅದರಲ್ಲೂ ನಮ್ಮ ಕಡೆ ನೋಡಿಕೊಂಡು ಕೊಡಬೇಕು

ಅಧ್ಯಕ್ಷರು ನಾನು ಅದನ್ನು ನೋಡಿಕೊಂಡು ಕೊಡುತ್ತಿದ್ದೇನೆ, ಅದರಲ್ಲಿ ನಾನು ಯಾವತ್ತೂ ಡಿಸ್‌ಕ್ರಿಮಿನೇಟ್ ಮಾಡಿಲ್ಲವಲ್ಲಾ?

2) ನಿಲುವಳಿ ಸೂಚನೆ ಮಂಡನೆಗೆ ಒತ್ತಾಯ

ವಿಷಯ ರಾಜ್ಯದಲ್ಲಿ ನಡೆದಿರುವ ನಕಲಿ ಸ್ಟ್ಯಾಂಪ್ ಪೇಪರ್ ಹಗರಣ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು) ಮಾನ್ಯ ಸಭಾಧ್ಯಕ್ಷರೇ, ಇವತ್ತು ರಾಜ್ಯದಲ್ಲಿ ಒಂದು ಪ್ರಮುಖವಾದಂತಹ ಹಗರಣ ಹೊರ ಬಂದಿದೆ ಅದು ನಕಲಿ ಸ್ಟ್ಯಾಂಪ್ ಪೇಪರ್ ಹಗರಣ ಇದು 10 ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ನಕಲಿ ಛಾಪಾ ಕಾಗದ ವ್ಯಾಪಾರವಾಗಿರುವಂಥಾದ್ದು ಈ ವಿಚಾರವನ್ನು ನಿಲುವಳಿ ಸೂಚನೆಯ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿದ್ದೇವೆ ಅದಕ್ಕೆ ದಯಮಾಡಿ ಪ್ರಸ್ತಾಪ ಮಾಡಲು ಅವಕಾಶ ಕೊಡಬೇಕು ಇದು ದೊಡ್ಡ ಹಗರಣ, ಇವತ್ತು ಇಡೀ ರಾಜ್ಯದಲ್ಲಿ ಆರ್ಥಿಕ ಭಯೋತ್ಪಾದನೆ ನಡೆಯುತ್ತಿದೆ